ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ : ಬಿಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಚೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 18-02-2015

## ಸುತ್ತೋಲೆ

ವಿಷಯ: 2014ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯ ಮರು ಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ

ಉಲ್ಲೇಖ:ನಿರ್ದೇಶಕರು, ತಾಂ.ಶಿ.ಇ. ಇವರ ಜ್ಞಾಪನ ಪತ್ರ ಸಂ: ಬಿಟಿಇ/02/ಇಸಿಎಸ್(2)/2014 ದಿನಾಂಕ: 18-02-2015

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014 ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯಗಳ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು ದಿನಾಂಕ:23-02-2015 ರಿಂದ 25-02-2015 ರವರೆಗೆ ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ ಹಾಗೂ ಕೆಳಕಂಡ ಬೋರ್ಡ್‌ವಾರು ವೇಳಾಪಟ್ಟಿಯಂತೆ ಮರುಮೌಲ್ಯಮಾಪನ ಕಾರ್ಯವನ್ನು ನಡೆಸಲು ನಿರ್ಧರಿಸಲಾಗಿದೆ. ಮರು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ವೆಬ್ ಪೋರ್ಟಲ್/ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸುವಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಮರುಮೌಲ್ಯಮಾಪನ ಸಮಯದಲ್ಲಿ ಉಪನ್ಯಾಸಕರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ ಮತ್ತು ಆಂತರಿಕ ಅಂಕಗಳ ಕಿರು ಪರೀಕ್ಷೆಗಳನ್ನು ಮರುಮೌಲ್ಯಮಾಪನ ಕಾರ್ಯದ ನಂತರ ನಡೆಸಲು ಅಗತ್ಯ ಕ್ರಮಕೈಗೊಳ್ಳುವುದು.

ತಾಂತ್ರಿಕ ಪರೀಕ್ಷಾ ಮಂಡಳಿಯ 139ನೇ ಕೇಂದ್ರಿಯ ಸಭೆಯ ನಿರ್ಣಯ 139.4.8.3ರ ಪ್ರಕಾರ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ಸಂಬಳವನ್ನು ಕಟಾಯಿಸಲಾಗುವುದು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರಿಯ ಸಭೆಯ ನಿರ್ಣಯ 151.3.5ರ ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ಕಾರ್ಯ ವಿಮುಕ್ತಿಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

| ಕ್ರ.ಸಂ. | ಮರು ಮೌಲ್ಯಮಾಪನ ಪ್ರಾರಂಭದ ದಿನಾಂಕ | ಬೋರ್ಡ್‌ನ ಹೆಸರು |
|---|---|---|
| 1 | 23-02-2015 | CE, CS, EC, ENG, EE, ME, SC |
| 2 | 24-02-2015 | AN, AT, MC, MN, MT, MTT, PT, ADFT, AR, BT, CH, CHEMISTRY, CN, CP, CR, IC,PO, TX, WT and all allied branches |

ಕಾರ್ಯದರ್ಶಿ

ಇವರಿಗೆ:

ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ: 1) ಇ-ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಕಂಪ್ಯೂಟರ್ ವಿಭಾಗ – ಮರುಮೌಲ್ಯಮಾಪಕರ ಪಟ್ಟಿಯನ್ನು ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ

ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ:18-02-2015

## ಜ್ಞಾಪನ

ವಿಷಯ: 2014ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನದ ಕುರಿತು.

ಉಲ್ಲೇಖ: ನಿರ್ದೇಶಕರ ಜ್ಞಾಪನ ಸಂಖ್ಯೆ:ಬಿಟಿಇ/02/ಇಸಿಎಸ್(2)/2014 ದಿ:18-02-2015

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯದ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಕಾರ್ಯವನ್ನು ದಿ: 23-02-2015 ರಿಂದ 25-02-2015 ರವರೆಗೆ ಎಂ ಇ ಐ ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿ ನಡೆಸಲು ನಿರ್ಧರಿಸಲಾಗಿದೆ. ಶ್ರೀ ಬಿ. ಕೃಷ್ಣಪ್ಪ, ಪ್ರಾಚಾರ್ಯರು, ಎಂ ಇ ಐ ಪಾಲಿಟೆಕ್ನಿಕ್, ಬೆಂಗಳೂರು, ಇವರನ್ನು ಮರುಮೌಲ್ಯಮಾಪನ ಕೇಂದ್ರದ ಶಿಬಿರಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

ಪ್ರಯುಕ್ತ ಮರು ಮೌಲ್ಯಮಾಪನ ಕಾರ್ಯಕ್ಕೆ ಸಂಸ್ಥೆಯ ಬೋಧನಾ ತರಗತಿಗಳು ಮತ್ತು ಕಂಪ್ಯೂಟರ್ ಲ್ಯಾಬ್ ಒದಗಿಸುವಂತೆ ಹಾಗೂ ಮರು ಮೌಲ್ಯಮಾಪನ ಸಮಯದಲ್ಲಿ ಮೂಲಭೂತ ಸೌಲಭ್ಯಗಳಾದ ಪೀಠೋಪಕರಣಗಳು, ನೀರು ಮತ್ತು ಶೌಚಾಲಯದ ಸಮರ್ಪಕ ವ್ಯವಸ್ಥೆ ಮಾಡುವಂತೆ ತಿಳಿಸಲಾಗಿದೆ. ಕಂಪ್ಯೂಟರ್ ಲ್ಯಾಬ್‌ನಲ್ಲಿ ಇಂಟರ್‌ನೆಟ್ ಸಂಪರ್ಕ ಮತ್ತು LAN ಸಂಪರ್ಕವನ್ನು ದಿ:20-02-2015ರೊಳಗೆ ಸಿದ್ಧಪಡಿಸಿ ಮಂಡಳಿಗೆ ವರದಿ ಮಾಡಲು ಸೂಚಿಸಿದೆ.

ಮರು ಮೌಲ್ಯಮಾಪನದ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಯಾವುದೇ ಥಿಯರಿ ವಿಷಯದ ತರಗತಿಗಳನ್ನು ನಡೆಸಬಾರದೆಂದು ತಿಳಿಸಲಾಗಿದೆ. ಮುಂದಿನ ರಜಾ ದಿನಗಳಲ್ಲಿ ವಿಶೇಷ ತರಗತಿಗಳನ್ನು ನಡೆಸಿ ಪಠ್ಯಕ್ರಮಗಳನ್ನು ಪೂರೈಸಬೇಕೆಂದು ತಿಳಿಸಲಾಗಿದೆ. ಈ ಸಮಯದಲ್ಲಿ ಕೇವಲ ಪ್ರಾಯೋಗಿಕ ವಿಷಯದ ತರಗತಿಗಳನ್ನು ಮಾತ್ರ ನಡೆಸುವಂತೆ ಸೂಚಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ:
ಪ್ರಿನ್ಸಿಪಾಲರು,
ಎಂ ಇ ಐ ಪಾಲಿಟೆಕ್ನಿಕ್,
ಬೆಂಗಳೂರು - ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
ಕಾರ್ಯದರ್ಶಿಯವರ ಆಪ್ತ ಶಾಖೆ

ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಬಿಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು -560001,
ದಿನಾಂಕ: 18-02-2015

## ಜ್ಞಾಪನ

ವಿಷಯ: 2014 ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಡಿಪ್ಲೋಮಾ ಪರೀಕ್ಷೆಯ ಥಿಯರಿ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ವಿವಿಧ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು/ ಹಿರಿಯ ಉಪನ್ಯಾಸಕರುಗಳನ್ನು ನಿಯೋಜಿಸುವ -ಕುರಿತು.

ಉಲ್ಲೇಖ: ನಿರ್ದೇಶಕರು, ತಾಂ.ಶಿ.ಇ. ಇವರ ಜ್ಞಾಪನ ಪತ್ರ ಸಂಖ್ಯೆ : ಬಿಟಿಇ/02/ಇಸಿಎಸ್(2)/2014 ದಿನಾಂಕ: 18-02-2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2014ರ ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಪರೀಕ್ಷೆಯ ಥಿಯರಿ ವಿಷಯಗಳ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯವನ್ನು ದಿನಾಂಕ:23-02-2015 ರಿಂದ 25-02-2015 ರವರೆಗೆ ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಇಲ್ಲಿ ನಡೆಸಲು ಕ್ರಮಕೈಗೊಳ್ಳಲಾಗಿದೆ. ಸದರಿ ಮರುಮೌಲ್ಯಮಾಪನ ಕಾರ್ಯವು ಸುಗಮವಾಗಿ ಜರುಗಲು ಈ ಕೆಳಗೆ ತಿಳಿಸಲಾದ ಪರೀಕ್ಷಕರ ಸಮಿತಿಯ ಅಧ್ಯಕ್ಷರು/ಸದಸ್ಯರು/ಸ್ಥಳೀಯ ಹಿರಿಯ ಉಪನ್ಯಾಸಕರುಗಳನ್ನು ಮರುಮೌಲ್ಯಮಾಪನದ ಶಿಬಿರದ ಮೇಲ್ವಿಚಾರಕರಾಗಿ ನಿಯೋಜಿಸಲಾಗಿದೆ. ಸದರಿ ಶಿಬಿರದ ಮೇಲ್ವಿಚಾರಕರುಗಳು ದಿನಾಂಕ: 23-02-2015 ರಂದು ಬೆಳಗ್ಗೆ 9.00ಗಂಟೆಗೆ ಎಂ.ಇ.ಐ ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದಲ್ಲಿ ಕಾರ್ಯ ವರದಿ ಮಾಡಿಕೊಂಡು ಮರುಮೌಲ್ಯಮಾಪನ ಕಾರ್ಯವನ್ನು ಸುಗಮವಾಗಿ ಜರುಗಿಸುವಂತೆ ಆದೇಶಿಸಲಾಗಿದೆ.

| ಕ್ರ.ಸಂ. | ವಿಭಾಗ | ಅಧ್ಯಕ್ಷರು/ಸದಸ್ಯರು/ಹಿರಿಯ ಉಪನ್ಯಾಸಕರು |
|---|---|---|
| 1 | ಸಿ.ಪಿ | 1.ಕೆ.ಗಜೇಂದ್ರ ಸಿಂಗ್, ಆ.ಶ್ರೇ.ಉ. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು<br>2.ರವೀಂದ್ರ. ಟಿ.ಎಲ್. ಆ.ಶ್ರೇ.ಉ ಜಿ.ಆರ್.ಐ.ಸಿ.ಪಿ. ಬೆಂಗಳೂರು<br>3.ಪ್ರಕಾಶ್‌ರಾಜು, ಆ.ಶ್ರೇ.ಉ. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಬೆಂಗಳೂರು<br>4.ಅಮೃತ್ ಚಿಂಚೋಳಿಕರ್, ಆ.ಶ್ರೇ.ಉ. ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಕಲಬುರಗಿ |
| 2 | ಇಂಗ್ಲೀಷ್ | 1.ಗೀತಾ.ಕೆ, ಆ.ಶ್ರೇ.ಉ ಜಿ.ಆರ್.ಐ.ಸಿ.ಪಿ ಬೆಂಗಳೂರು<br>2.ರಾಜ್ಯಶ್ರೀ ಶ್ರೀಕಾಂತ್, ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ |
| 3 | ಸಿವಿಲ್ | 1.ವಿ.ಜಿ. ಕೆಂಚಿ, ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಬಾಗಲಕೋಟೆ<br>2.ಎಸ್.ಜಿ. ಅಳಗಿ ಆ.ಶ್ರೇ.ಉ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಹುಬ್ಬಳ್ಳಿ<br>3.ಸಿ.ಎನ್. ರತ್ನಾಕರ ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್ ಮಿರ್ಲೆ<br>4.ಎಂ.ಸುಬ್ರಹ್ಮಣ್ಯ, ಆ.ಶ್ರೇ.ಉ ಎಸ್.ಜೆ. ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು |
| 4 | ಎಲೆಕ್ಟ್ರಿಕಲ್ | 1.ಪಿ.ಜಿ. ಪ್ರಕಾಶ್ ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಚನ್ನಸಂದ್ರ, ಬೆಂಗಳೂರು<br>2.ನರಸಪ್ಪ ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್, ತುಮಕೂರು<br>3.ಬಸವರಾಜು ಆ.ಶ್ರೇ.ಉ. ಎಸ್.ಜೆ.ಸ.(ಸಂಜೆ).ಪಾಲಿಟೆಕ್ನಿಕ್, ಬೆಂಗಳೂರು<br>4.ಹೆಚ್.ಕೆ.ಮಂಜಪ್ಪ ಆ.ಶ್ರೇ.ಉ, ಡಿ.ಆರ್.ಆರ್.(ಸ) ಪಾಲಿಟೆಕ್ನಿಕ್, ದಾವಣಗೆರೆ |

| | | |
|---|---|---|
| 5 | ಮೆಕ್ಯಾನಿಕಲ್ | 1.ಕಾಂತರಾಜಪ್ಪ ಹೆಚ್.ಎಲ್. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಬಾಗೇಪಲ್ಲಿ<br>2..ಮಲ್ಲಿಕಾರ್ಜುನಪ್ಪ ಶಾವಿ. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಅಫ್ಜಲ್‌ಪುರ<br>3.ಕೆ.ರಘುಕುಮಾರ್, ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್. ಕೆ.ಜಿ.ಎಫ್<br>4. ಎ.ಎ.ಅಬ್ದುಲ್ ಖಾದರ್. ಆ.ಶ್ರೇ.ಉ ಕರ್ನಾಟಕ ಸರ್ಕಾರಿ ಪಾಲಿಟೆಕ್ನಿಕ್, ಮಂಗಳೂರು |
| 6 | ವಿಜ್ಞಾನ | 1.ಆರ್.ಜಿ. ಪವಾರ್, ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ವಿಜಯಪುರ<br>2.ನಾಗಭೂಷಣ್ .ಎನ್.ಯು ಆ.ಶ್ರೇ.ಉ, ಸರ್ಕಾರಿ ಪಾಲಿಟೆಕ್ನಿಕ್ ಬಾಗೇಪಲ್ಲಿ<br>3.ಪಿ. ರಫೆಲ್ ಆ.ಶ್ರೇ.ಉ ಸ್ಕೂಲ್ ಆಫ್ ಮೈನ್ಸ್, ಕೆ.ಜಿ.ಎಫ್<br>4.ಶಿವಕುಮಾರ್.ಕೆ.ಎಸ್ ಉಪನ್ಯಾಸಕರು, ಸರ್ಕಾರಿ ಮಹಿಳಾ ವಸತಿ ಪಾಲಿಟೆಕ್ನಿಕ್, ಶಿವಮೊಗ್ಗ |
| 7 | ಇ ಅಂಡ್ ಸಿ | 1.ಡೆರಿಕ್ ಅಲೆಕ್ಸಾಂಡರ್, ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್, ಕೆ.ಜಿ.ಎಫ್<br>2.ಮಂಜುನಾಥ. ಎಸ್. ಆ.ಶ್ರೇ.ಉ. ಎಸ್.ಜೆ. ಸರ್ಕಾರಿ (ಸಂಜೆ) ಪಾಲಿಟೆಕ್ನಿಕ್, ಬೆಂಗಳೂರು<br>3.ಜಿ.ಕೆ.ರಘು ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್. ಚಿಂತಾಮಣಿ |
| 8 | ಕಂಪ್ಯೂಟರ್ ಸೈನ್ಸ್ | 1.ಹೆಚ್.ಆರ್. ರಾಧ, ಆ.ಶ್ರೇ.ಉ ಶ್ರೀಮತಿ ಎಲ್.ವಿ.ಪಾಲಿಟೆಕ್ನಿಕ್, ಹಾಸನ<br>2.ಅಜ್ಮಲ್. ಎಸ್.ಎ ಆ.ಶ್ರೇ.ಉ ಸರ್ಕಾರಿ ಪಾಲಿಟೆಕ್ನಿಕ್ ಸೊರಬ<br>3.ಕಾಂತರಾಜು ಹೆಚ್.ಎಂ. ಹಿ.ಶ್ರೇ.ಉ ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ರಾಮನಗರ |
| 9 | ಆಟೋಮೊಬೈಲ್ | 1.ಹೆಚ್.ಕೆ.ಕೆಂಪೇಗೌಡ, ಪ್ರಾಚಾರ್ಯರು, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್,ಶಿರಾಳಕೊಪ್ಪ |

ಕಾರ್ಯದರ್ಶಿ

ಇವರಿಗೆ,

ಮೇಲ್ಕಂಡ ಪರೀಕ್ಷಕರ ಸಮಿತಿಗಳ ಅಧ್ಯಕ್ಷರು/ಸದಸ್ಯರು/ಹಿರಿಯ ಉಪನ್ಯಾಸಕರುಗಳಿಗೆ – ಮುಂದಿನ ಕ್ರಮಕ್ಕಾಗಿ

ಪ್ರತಿ:

1.ಸಂಬಂಧಪಟ್ಟ ಪ್ರಾಚಾರ್ಯರುಗಳಿಗೆ – ಅಗತ್ಯಕ್ರಮಕ್ಕಾಗಿ
2. ಕಂಪ್ಯೂಟರ್ ವಿಭಾಗ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇ-ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4.ಕಾರ್ಯದರ್ಶಿಯವರ ಆಪ್ತಶಾಖೆ
5. ಕಡತಕ್ಕೆ

**<u>ಕರ್ನಾಟಕ ಸರ್ಕಾರ</u>**

**<u>ತಾಂತ್ರಿಕ ಶಿಕ್ಷಣ ಇಲಾಖೆ</u>**

ಸಂಖ್ಯೆ:ಬಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ: 18-02-2015

**<u>ಜ್ಞಾಪನ</u>**

**ವಿಷಯ:** 2014 ನವೆಂಬರ್/ಡಿಸೆಂಬರ್ ಪರೀಕ್ಷೆಗಳ ಮರು ಮೌಲ್ಯಮಾಪನವಾದ ಥಿಯರಿ ಉತ್ತರ ಪತ್ರಿಕೆಗಳ ಅಂಕಗಳನ್ನು ಮರುಮೌಲ್ಯಮಾಪನ ಕೇಂದ್ರದಲ್ಲಿ ಮಾರ್ಕ್ಸ್‌ಲಿಸ್ಟ್‌ನಿಂದ 2 ಬಾರಿ ಕೀಯಿಂಗ್ ಮಾಡಿಸುವ ಕುರಿತು.

**ಉಲ್ಲೇಖ:** ನಿರ್ದೇಶಕರ ಜ್ಞಾಪನ ಸಂಖ್ಯೆ: ಬಟಿಇ/02/ಇಸಿಎಸ್(2)2014 ದಿನಾಂಕ: 18-02-2015

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಜ್ಞಾಪನದನ್ವಯ ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು ಇಲ್ಲಿ ಮರು ಮೌಲ್ಯಮಾಪನ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಸದರಿ ಮರು ಮೌಲ್ಯಮಾಪನ ಕೇಂದ್ರದಲ್ಲಿ ಮರು ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಅಂಕಗಳನ್ನು ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ನಿಂದ ಎರಡು ಬಾರಿ ಕೀಯಿಂಗ್ ಮಾಡಿಸಲು ಮರು ಮೌಲ್ಯಮಾಪನ ಕೇಂದ್ರದ ಸಂಸ್ಥೆಯ ಗಣಕ ಕೇಂದ್ರದಲ್ಲಿ ಮತ್ತು ಜಿ.ಆರ್.ಐ.ಸಿ.ಪಿ ಬೆಂಗಳೂರು ಸಂಸ್ಥೆಯಲ್ಲಿ ಸೂಕ್ತ ವ್ಯವಸ್ಥೆ ಮಾಡಲು ಸಂಸ್ಥೆಯ ಪ್ರಾಚಾರ್ಯರು/ಶಿಬಿರಾಧಿಕಾರಿ ಹಾಗೂ ಕೀಯಿಂಗ್ ಅಧಿಕಾರಿಗಳಿಗೆ ಆದೇಶಿಸಲಾಗಿದೆ. ಪ್ರಯುಕ್ತ ಸಂಬಂಧಪಟ್ಟ ಪ್ರಾಚಾರ್ಯರುಗಳು ಮರು ಮೌಲ್ಯಮಾಪನ ಕೇಂದ್ರದ ಅಧಿಕಾರಿಗಳು/ಮೇಲ್ವಿಚಾರಕರುಗಳೊಂದಿಗೆ ಸಮನ್ವಯತೆಯಿಂದ ಕೀಯಿಂಗ್ ಅಧಿಕಾರಿಗಳ ಉಸ್ತುವಾರಿಯಲ್ಲಿ ಮೊದಲನೇ ಕೀಯಿಂಗ್/ಎರಡನೇ ಕೀಯಿಂಗ್ ಮಾಡಿಸಲು ಇಬ್ಬರು ಜವಾಬ್ದಾರಿಯುತ ಉಪನ್ಯಾಸಕರನ್ನು ನೇಮಿಸಿ ಅವರಿಗೆ ಸೂಕ್ತ ಸಿಬ್ಬಂದಿಯನ್ನು ಒದಗಿಸಿಕೊಟ್ಟು ಸುಸೂತ್ರವಾಗಿ ನಡೆಸಿ ಗೌಪ್ಯತೆ ಮತ್ತು ಪಾವಿತ್ರ್ಯತೆಯನ್ನು ಕಾಪಾಡಲು ಸೂಚಿಸಲಾಗಿದೆ.

| ಮರು ಮೌಲ್ಯಮಾಪನ ಕೇಂದ್ರ | ಕೀಯಿಂಗ್ ಮಾಡಿಸಬೇಕಾದ ಪಾಲಿಟೆಕ್ನಿಕ್ | ಕೀಯಿಂಗ್ ಮಾಡಿಸಲು ನಿಯೋಜಿಸಲಾದ ಕೀಯಿಂಗ್ ಅಧಿಕಾರಿಗಳು: ಶ್ರೀ/ಶ್ರೀಮತಿ |
| --- | --- | --- |
| ಎಂ.ಇ.ಐ. ಪಾಲಿಟೆಕ್ನಿಕ್, ಬೆಂಗಳೂರು | 1)ಎಂ.ಇ.ಐ.ಪಾಲಿಟೆಕ್ನಿಕ್ ಬೆಂಗಳೂರು | 1.ಜಿ.ಕೃಷ್ಣಪ್ಪ, ಪ್ರಾಚಾರ್ಯರು, ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು – ಮರು ಮೌಲ್ಯಮಾಪನ ಕೇಂದ್ರದ ಶಿಬಿರಾಧಿಕಾರಿ<br><u>ಕೀಯಿಂಗ್ ಅಧಿಕಾರಿಗಳು</u><br>2. ಶ್ರೀಮತಿ ವಿನುತಾ ನಾಗೇಶ್ ಆ.ಶ್ರೇ.ಉ ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು<br>3. ಶ್ರೀಮತಿ ಶ್ರೀವರ್ಷಿಣಿ.ಎಂ.ಆರ್. ಆ.ಶ್ರೇ.ಉ ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು |
| | 2)ಜಿ.ಆರ್.ಐ.ಸಿ.ಪಿ. ಬೆಂಗಳೂರು | 1.ಎಂ.ಕಮಲಾಕ್ಷಿ, ಪ್ರಾಚಾರ್ಯರು, ಜಿ.ಆರ್.ಐ.ಸಿ.ಪಿ, ಬೆಂಗಳೂರು<br><u>ಕೀಯಿಂಗ್ ಅಧಿಕಾರಿಗಳು</u><br>2. ನಿಶಾತ್ ತಬಸ್ಸುಮ್ ಉಪನ್ಯಾಸಕರು ಜಿ.ಆರ್.ಐ.ಸಿ.ಪಿ, ಬೆಂಗಳೂರು<br>3. ಸಮೀಉಲ್ಲಾಖಾನ್, ಜಿ.ಆರ್.ಐ.ಸಿ.ಪಿ, ಬೆಂಗಳೂರು<br><br><u>ಕೀಯಿಂಗ್ ಕಾರ್ಯದ ಮೇಲುಸ್ತುವಾರಿ</u><br>1.ಡಿ.ವಿ.ಶ್ರೀನಿವಾಸಮೂರ್ತಿ, ಸಿಸ್ಟಂ ಅನಾಲಿಸ್ಟ್, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು – ಕೀಯಿಂಗ್ ಕಾರ್ಯದ ಮೇಲುಸ್ತುವಾರಿ<br>2.ಬಿ.ಹೆಚ್.ಸುಷ್ಮ, ಪ್ರೋಗ್ರಾಮರ್, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು – ತಂತ್ರಾಂಶ ಸ್ಥಾಪನೆ ಮತ್ತು ನಿರ್ವಹಣೆ<br>3. ಕೆ.ಮಹದೇವಯ್ಯ,ಆ.ಶ್ರೇ.ಉ/ಗಣಕ ಕೇಂದ್ರ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು – ತಂತ್ರಾಂಶ ಸ್ಥಾಪನೆ ಮತ್ತು ನಿರ್ವಹಣೆ |

ಎಂ.ಇ.ಐ.ಪಾಲಿಟೆಕ್ನಿಕ್, ಮರುಮೌಲ್ಯಮಾಪನ ಶಿಬಿರದಿಂದ ಡಾ॥ವೀರಣ್ಣ, ಪ್ರ.ದ.ಸ (ಇಎಪಿ ವಿಭಾಗ) ಮತ್ತು ಶ್ರೀ ಪಿ.ಚೆನ್ನಕೇಶವ (ಇಎಪಿ ವಿಭಾಗ) ಇವರು ಶ್ರೀಮತಿ ವಿನುತಾ ನಾಗೇಶ್, ವಿಭಾಗಾಧಿಕಾರಿಗಳು, ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು ಮತ್ತು ಶ್ರೀಮತಿ ಶ್ರೀವರ್ಷಿಣಿ.ಎಂ.ಆರ್ ಆ.ಶ್ರೇ.ಉ ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು ಇವರುಗಳಿಗೆ ಮೊದಲನೇ ಕೀಯಿಂಗ್‌ಗಾಗಿ ಮಾರ್ಕ್ಸ್‌ಲಿಸ್ಟ್‌ಗಳನ್ನು ಸ್ವೀಕೃತಿಯೊಂದಿಗೆ ಹಸ್ತಾಂತರಿಸುವುದು ಮತ್ತು ಮೊದಲನೇ ಕೀಯಿಂಗ್ ಆದಂತಹ ("1st Entry Keyed" ಎಂದು ರಬ್ಬರ್ ಸ್ಟಾಂಪ್ ಮುದ್ರೆ ಇರುವಂತಹ) ಮಾರ್ಕ್ಸ್‌ಲಿಸ್ಟ್‌ಗಳನ್ನು ಪಡೆದು ಸೂಕ್ತ ಸ್ವೀಕೃತಿ ನೀಡಿ ಎರಡನೇ ಕೀಯಿಂಗ್‌ಗಾಗಿ ಶ್ರೀಮತಿ ನಿಶಾತ್ ತಬಸ್ಸುಮ್, ಹಿ.ಶ್ರೇ.ಉಪನ್ಯಾಸಕರು, ಸಿಪಿ. ವಿಭಾಗ, ಜಿ.ಆರ್.ಐ.ಸಿ.ಪಿ ಬೆಂಗಳೂರು ಇವರಿಗೆ ಸ್ವೀಕೃತಿಯೊಡನೆ ಹಸ್ತಾಂತರಿಸುವುದು.

ಎರಡನೇ ಕೀಯಿಂಗ್ ಆದ ಮಾರ್ಕ್ಸ್‌ಲಿಸ್ಟ್‌ಗಳ ಮೇಲೆ "2nd Entry keyed" ಎಂದು ಠಸ್ಸೆ ಹೊಡೆಸಿ ಕೆ.ಪಿ.ಓ ಕಿರು ಸಹಿ ಮಾಡಿಸುವ ವ್ಯವಸ್ಥೆ ಮಾಡುವುದು ಎರಡನೇ ಕೀಯಿಂಗ್ ಆದಂತಹ ಮಾರ್ಕ್ಸ್‌ಲಿಸ್ಟ್‌ಗಳನ್ನು ಜಿ.ಆರ್.ಐ.ಸಿ.ಪಿ ಬೆಂಗಳೂರು ಇಲ್ಲಿನ ಕೀಯಿಂಗ್‌ಗಾಗಿ ನಿಯೋಜಿಸಲ್ಪಟ್ಟ ಉಪನ್ಯಾಸಕರು ಸುರಕ್ಷಿತವಾಗಿ ಶೇಖರಿಸಿಟ್ಟು ಕೊನೆಯಲ್ಲಿ ಡಾ॥ವೀರಣ್ಣ ಪ್ರ.ದ.ಸ (ಇಎಪಿ ವಿಭಾಗ) ತಾಂ.ಪ.ಮಂಡಳಿ ಇವರಿಗೆ ಸ್ವೀಕೃತಿಯೊಡನೆ ಹಸ್ತಾಂತರಿಸಲು ಸೂಚಿಸಲಾಗಿದೆ.

ಕೀಯಿಂಗ್ ಮಾಡಿಸಲು ಬೇಕಾದ ತಂತ್ರಾಂಶ ಸ್ಥಾಪಿಸುವಲ್ಲಿ ಮತ್ತು ತಾಂತ್ರಿಕ ಸಹಾಯಕ್ಕಾಗಿ ಶ್ರೀ ಡಿ.ವಿ.ಶ್ರೀನಿವಾಸಮೂರ್ತಿ ಸಿಸ್ಟಂ ಅನಾಲಿಸ್ಟ್ ; ಶ್ರೀಮತಿ ಬಿ.ಹೆಚ್.ಸುಷ್ಮ ಪ್ರೋಗ್ರಾಮರ್, ಕೆ. ಮಹದೇವಯ್ಯ, ಆ.ಶ್ರೇ.ಉ./ಗಣಕ ಕೇಂದ್ರ, ತಾಂತ್ರಿಕ ಪರೀಕ್ಷಾ ಮಂಡಳಿ ಹಾಗೂ ಶ್ರೀ ಹರೀಶ್ ಶೆಟ್ಟಿ, ಆ.ಶ್ರೇ.ಉ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು ಇವರ ಮಾರ್ಗದರ್ಶನ ಪಡೆಯಬೇಕೆಂದು ಈ ಮೂಲಕ ತಿಳಿಸಲಾಗಿದೆ. ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯತೆ ಕಾಪಾಡಬೇಕೆಂದು ಸೂಚಿಸಲಾಗಿದೆ.

ಸದರಿ ಅಧಿಕಾರಿಗಳು ಮರು ಮೌಲ್ಯಮಾಪನದ ಅಂಕಗಳ ಕೀಯಿಂಗ್ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕೆಂದು ತಿಳಿಸಲಾಗಿದೆ

ಕಾರ್ಯದರ್ಶಿ

ಇವರಿಗೆ,

1.ಪ್ರಾಚಾರ್ಯರು, ಎಂ.ಇ.ಐ.ಪಾಲಿಟೆಕ್ನಿಕ್, ಬೆಂಗಳೂರು – ಮುಂದಿನ ಕ್ರಮಕ್ಕಾಗಿ
2. .ಪ್ರಾಚಾರ್ಯರು, ಜಿ.ಆರ್.ಐ.ಸಿ.ಪಿ ಬೆಂಗಳೂರು – ಮುಂದಿನ ಕ್ರಮಕ್ಕಾಗಿ
2.ಮೇಲ್ಕಂಡ ಅಧಿಕಾರಿಗಳಿಗೆ- ಮುಂದಿನ ಕ್ರಮಕ್ಕಾಗಿ

ಪ್ರತಿ:

1. ಕಾರ್ಯದರ್ಶಿಯವರ ಆಪ್ತ ಶಾಖೆ.
2. ಕಂಪ್ಯೂಟರ್ ವಿಭಾಗ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3. ಇ-ಗವರ್ನೆನ್ಸ್ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕಡತಕ್ಕೆ.

ಕರ್ನಾಟಕ ಸರ್ಕಾರ

<u>ತಾಂತ್ರಿಕ ಶಿಕ್ಷಣ ಇಲಾಖೆ</u>

ಸಂಖ್ಯೆ:ಟಿಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು –01
ದಿನಾಂಕ: 18-02-2015

**<u>ಜ್ಞಾಪನ</u>**

<u>**ವಿಷಯ**</u>::ಬೆಂಗಳೂರು ಮರುಮೌಲ್ಯಮಾಪನ ಕೇಂದ್ರದಲ್ಲಿ 2014 ನವೆಂಬರ್/ಡಿಸೆಂಬರ್ ಡಿಪ್ಲೋಮ ಸೆಮಿಸ್ಟರ್ ಪರೀಕ್ಷೆಗಳ ಮೌಲ್ಯಮಾಪನವಾದ ಥಿಯರಿ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಶಿಬಿರದಲ್ಲಿ ಸಂಬಂಧಿಸಿದ ಅಧಿಕಾರಿಗಳು ನಿರ್ವಹಿಸಬೇಕಾದ ಜವಾಬ್ದಾರಿಗಳ ಬಗ್ಗೆ.

<u>**ಉಲ್ಲೇಖ**</u>: ನಿರ್ದೇಶಕರ ಜ್ಞಾಪನ ಸಂಖ್ಯೆ: ಟಿಟಿಇ/02/ಇಸಿಎಸ್(2)/2014 ದಿನಾಂಕ: 18-02-2015

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2014 ನವೆಂಬರ್/ಡಿಸೆಂಬರ್ ಸೆಮಿಸ್ಟರ್ ಡಿಪ್ಲೊಮಾ ಪರೀಕ್ಷೆಯ ಉತ್ತರಪತ್ರಿಕೆಗಳ ಮರುಮೌಲ್ಯಮಾಪನ ಕಾರ್ಯಕ್ಕೆ ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಮರುಮೌಲ್ಯಮಾಪನ ಕೇಂದ್ರಕ್ಕೆ ನಿಯೋಜಿಸಲಾದ ಅಧಿಕಾರಿಗಳ ಕರ್ತವ್ಯ/ಜವಾಬ್ದಾರಿಗಳ ಪಟ್ಟಿಯನ್ನು ಈ ಕೆಳಕಂಡಂತೆ ನೀಡಲಾಗಿದೆ.

<u>**ಶಿಬಿರಾಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು:**</u>

1. ಮರುಮೌಲ್ಯಮಾಪನ ಶಿಬಿರ ನಡೆಸಲು ಬೇಕಾದ ತರಗತಿ ಕೊಠಡಿಗಳ ಮತ್ತು ಪಿಠೋಪಕರಣಗಳ ವ್ಯವಸ್ಥೆ ಮಾಡುವುದು ಹಾಗೂ ಮರುಮೌಲ್ಯಮಾಪನ ಸಮಯದಲ್ಲಿ ಮೂಲಭೂತ ಸೌಕರ್ಯಗಳಾದ, ನೀರು, ವಿದ್ಯುತ್ ಹಾಗೂ ಮೌಲ್ಯಮಾಪನ ಕಾರ್ಯಕ್ಕೆ ತಮ್ಮ ಸಂಸ್ಥೆಯ ಇಬ್ಬರು 'ಡಿ' ಗ್ರೂಪ್ ನೌಕರರನ್ನು ನಿಯೋಜಿಸುವುದು.

2. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ ಇವರಿಂದ ಮರುಮೌಲ್ಯಮಾಪನಕ್ಕಾಗಿ ನಿಮ್ಮ ಸಂಸ್ಥೆಯಲ್ಲಿ ಇಡಲಾಗಿರುವ ಉತ್ತರಪತ್ರಿಕೆಗಳನ್ನು ಬೆಂಕಿ ಮತ್ತು ನೀರಿನ ಸಾಮೀಪ್ಯದಿಂದಾಗಿ ಅಥವಾ ಯಾವುದೇ ಸಂಭವನೀಯ ಪ್ರಕೃತಿ ವಿಕೋಪಗಳಿಂದಾಗಲಿ ಅಥವಾ ಕಿಡಿಗೇಡಿಗಳ ಕೈವಾಡದಿಂದಾಗಲಿ ಹಾನಿಯಾಗದಂತೆ ಗರಿಷ್ಠ ಮಟ್ಟದ ಸುರಕ್ಷತೆಯುಳ್ಳ ಕೊಠಡಿಯಲ್ಲಿ ಭದ್ರವಾಗಿ ಇಡಲು ಸಾಧ್ಯವಾದ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವುದು ಹಾಗೂ ಪೊಲೀಸ್ ರಕ್ಷಣೆ ಪಡೆಯುವುದು.

3. ಮರುಮೌಲ್ಯಮಾಪನದ ಪಾವಿತ್ರ್ಯತೆ ಹಾಗೂ ಗೌಪ್ಯತೆ ಕಾಪಾಡುವ ಬಗ್ಗೆ ಅಧಿಕಾರಿಯವರ ಜೊತೆ ಮತ್ತು ಮೇಲ್ವಿಚಾರಕರ ಜೊತೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವುದು ಮತ್ತು ಮೌಲ್ಯಮಾಪನದ ಪ್ರಗತಿ ಬಗ್ಗೆ ಪ್ರತಿದಿನ ಕಾರ್ಯದರ್ಶಿಗಳು, ತಾಂ.ಪ.ಮಂ. ಬೆಂಗಳೂರು ಇವರಿಗೆ ಮಾಹಿತಿ ನೀಡುವುದು.

<u>**ಮರುಮೌಲ್ಯಮಾಪನ ಶಿಬಿರದ ಮೇಲ್ವಿಚಾರಕರು/ಪರೀಕ್ಷಕರ ಸಮಿತಿ ಸದಸ್ಯರು/ಅಧ್ಯಕ್ಷರು ನಿರ್ವಹಿಸಬೇಕಾದ ಕರ್ತವ್ಯಗಳು:**</u>

1. ಮರುಮೌಲ್ಯಮಾಪನ ಕೇಂದ್ರದಲ್ಲಿ ಸಮಿತಿವಾರು ಹಾಜರಾತಿ ಪುಸ್ತಕವನ್ನು ಇಡತಕ್ಕದ್ದು. ಹಾಜರಾತಿ ಪುಸ್ತಕದಲ್ಲಿ ಮರುಮೌಲ್ಯಮಾಪಕರ ಹೆಸರಿನ ಮುಂದಿರುವ Staff ID ಅನ್ನು ತಿಳಿಸುವುದು ಹಾಗೂ ಮಾರ್ಕ್ಸ್‌ಲಿಸ್ಟ್‌ನಲ್ಲಿ ಮರುಮೌಲ್ಯಮಾಪಕರು Staff ID ಬರೆಯುವುದು ಕಡ್ಡಾಯವೆಂದು ತಿಳಿಸುವುದು.

2. ಸಮರ್ಪಕವಾಗಿ ಮರುಮೌಲ್ಯಮಾಪನ ಮಾಡುವ ಮರುಮೌಲ್ಯಮಾಪಕರಿಗೆ ಅಗತ್ಯ ಮಾರ್ಗದರ್ಶನ ನೀಡುವುದು, ಮರುಮೌಲ್ಯಮಾಪಕರು ಅಸಮರ್ಪಕವಾಗಿ ಮರುಮೌಲ್ಯಮಾಪನ ಮಾಡುವುದು ಸ್ಥಿರವಾಗಿ ಮುಂದುವರೆದರೆ (Consistantly erratic valuation) ಮಂಡಳಿಯ ಅಧಿಕಾರಿಗಳಿಗೆ ಸೂಕ್ತ ಶಿಸ್ತು ಕ್ರಮಕ್ಕಾಗಿ ಶಿಫಾರಸ್ಸು ಮಾಡುವುದು.

3. ಸಮಯಪಾಲನೆ ಮಾಡದ, ಅಶಿಸ್ತು ಮತ್ತು ಸಮರ್ಪಕ ಮರುಮೌಲ್ಯಮಾಪನ ಮಾಡದ, ಪ್ರತಿದಿನ 30 ಥಿಯರಿ ಉತ್ತರ ಪತ್ರಿಕೆಗಳ ದರದಲ್ಲಿ ಮರುಮೌಲ್ಯಮಾಪನ ಮಾಡದ, ಮಾರ್ಕ್ಸ್‌ಲಿಸ್ಟ್‌ನಲ್ಲಿ Staff ID ಬರೆಯಲು ನಿರ್ಲಕ್ಷ್ಯವಹಿಸಿದವರ ಪಟ್ಟಿಯನ್ನು ಅಧಿಕಾರಿಗಳ ಮುಖಾಂತರ ಕಾರ್ಯದರ್ಶಿ ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರಿಗೆ ಸಲ್ಲಿಸುವುದು.

4. ಸಂಬಂಧಪಟ್ಟ ಪ್ರಿನ್ಸಿಪಾಲರ/ಶಿಬಿರಾಧಿಕಾರಿಗಳ ಸಹಕಾರದೊಂದಿಗೆ ಮರುಮೌಲ್ಯಮಾಪಕರಿಗೆ ಮರುಮೌಲ್ಯಮಾಪನ ಮಾಡಲು ಸೂಕ್ತ ಆಸನ ವ್ಯವಸ್ಥೆ ಮಾಡುವುದು. ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಮರುಮೌಲ್ಯಮಾಪಕರ ಯಾವುದೇ ಸಮಸ್ಯೆಗಳಿದ್ದಲ್ಲಿ ಬಗೆಹರಿಸಲು ಕ್ರಮ ಕೈಗೊಳ್ಳುವುದು.

5. ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಎಲ್ಲಾ ಮರುಮೌಲ್ಯಮಾಪಕರು ಕಾರ್ಯವರದಿ ಮಾಡಿಕೊಂಡಿರುವ ಬಗ್ಗೆ ಪರಿಶೀಲಿಸತಕ್ಕದ್ದು. ಮರುಮೌಲ್ಯಮಾಪಕರು ಮರುಮೌಲ್ಯಮಾಪನಕ್ಕೆ ನಿಗದಿತ ಸಮಯದಲ್ಲಿ ಹಾಜರಾಗುತ್ತಿರುವ ಬಗ್ಗೆ ಪರಿಶೀಲಿಸುವುದು. ಮರುಮೌಲ್ಯಮಾಪನ ಕೊಠಡಿಗಳಲ್ಲಿ ಮರುಮೌಲ್ಯಮಾಪಕರ ಹೊರತು ಬೇರೆ ಯಾರು ಇರದಂತೆ ಕ್ರಮ ಕೈಗೊಳ್ಳುವುದು.

6. Valuer's Certificate ಮತ್ತು Attendance Certificate ನೀಡುವ ಸಂದರ್ಭದಲ್ಲಿ ಪ್ರತಿ ಮರುಮೌಲ್ಯಮಾಪಕರಿಂದ ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳ ಸಂಖ್ಯೆ ಮತ್ತು ವಾಪಸ್ಸು ನೀಡಿರುವ ಮಾರ್ಕ್ಸ್‌ಲಿಸ್ಟ್ (ML) ಗಳ ಸಂಖ್ಯೆ ಅದರಲ್ಲಿನ ಒಟ್ಟು ಕ್ಯಾಂಡಿಡೇಟ್‌ಗಳ ಸಂಖ್ಯೆಯನ್ನು ತಾಳೆ ಮಾಡುವುದು ನಂತರ ಕಿರುಸಹಿ ಮಾಡುವುದು.

7. ಮರುಮೌಲ್ಯಮಾಪನದ ಪ್ರಗತಿ ಬಗ್ಗೆ ಪ್ರತಿದಿನ ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು, ಇವರಿಗೆ ಮಾಹಿತಿ ನೀಡುವುದು ಮತ್ತು ಮೌಲ್ಯಮಾಪನವಾದ ಉತ್ತರ ಪತ್ರಿಕೆಗಳು, ಹಾಜರಾದ ಮೌಲ್ಯಮಾಪಕರು, ಗೈರು ಹಾಜರಾದ ಮರುಮೌಲ್ಯಮಾಪಕರು ಇನ್ನಿತರ ಎಲ್ಲಾ ಮಾಹಿತಿ ಅಂಕಿಅಂಶಗಳನ್ನು ಬೋರ್ಡ್‌ವಾರು ಕಾರ್ಯದರ್ಶಿಯವರಿಗೆ ಮರುಮೌಲ್ಯಮಾಪನದ ಕೊನೆಯಲ್ಲಿ ಸಲ್ಲಿಸುವುದು.

8. ಮರುಮೌಲ್ಯಮಾಪನ ಮುಕ್ತಾಯವಾಗುವವರೆಗೂ ಮರುಮೌಲ್ಯಮಾಪನ ಕೇಂದ್ರದಲ್ಲಿಯೇ ಹಾಜರಿದ್ದು ಮರುಮೌಲ್ಯಮಾಪನದ ಪಾವಿತ್ರ್ಯತೆ ಹಾಗೂ ಗೌಪ್ಯತೆ ಕಾಪಾಡುವ ಬಗ್ಗೆ ಮಂಡಳಿಯ ಅಧಿಕಾರಿಯವರ ಜೊತೆ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವುದು.

9. ಮರು ಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಪಾಲಿಸಲು ಅನುವಾಗುವಂತೆ ಸುತ್ತೋಲೆಸುವುದು ಮತ್ತು ನಿಗಾ ಇಡುವುದು.

10. ಕಾಲಕಾಲಕ್ಕೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ/ಕಾರ್ಯದರ್ಶಿ, ತಾಂ.ಪ.ಮಂಡಳಿ ಇವರು ನೀಡುವ ನಿರ್ದೇಶನಗಳನ್ನು ಪಾಲಿಸುವುದು.

<u>ಕೀಯಿಂಗ್ ಮಾಡಿಸಲು ನಿಯೋಜಿಸಲಾದ ಅಧಿಕಾರಿಗಳು ನಿರ್ವಹಿಸಬೇಕಾದ ಕರ್ತವ್ಯಗಳು</u>

1. ಮರುಮೌಲ್ಯಮಾಪನವಾದ ಉತ್ತರ ಪತ್ರಿಕೆಗಳಿಗೆ ಸಂಬಂಧಪಟ್ಟ ಮಾರ್ಕ್ಸ್‌ಲಿಸ್ಟ್‌ಗಳಲ್ಲಿ ಮೌಲ್ಯಮಾಪಕರು BTELinx Staff ID ಯನ್ನು ಕಡ್ಡಾಯವಾಗಿ ನಮೂದಿಸಲು ಮೌಲ್ಯಮಾಪನ ಕೇಂದ್ರದಲ್ಲಿ ಆಗಿಂದಾಗ್ಗೆ ತಿಳಿಸುವುದು.

2. ಮರುಮೌಲ್ಯಮಾಪನವಾದ ಮಾರ್ಕ್ಸ್‌ಲಿಸ್ಟ್‌ಗಳನ್ನು ಮೊದಲನೆ ಕೀಯಿಂಗ್ ಮಾಡಿಸಲು ಮತ್ತು ಮೊದಲನೇ ಕೀಯಿಂಗ್ ಆದಂತಹ ಮಾರ್ಕ್ಸ್‌ಲಿಸ್ಟ್ ಗಳನ್ನು ಕಾರ್ಯದರ್ಶಿಯವರು ತಿಳಿಸಿದ ರೀತಿ ಜೊತೆಜೊತೆಗೆ ಎರಡನೇ ಕೀಯಿಂಗ್ ಮಾಡಿಸಲು ಪ್ರಾಚಾರ್ಯರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳಿಗೆ ಹಸ್ತಾಂತರಿಸುವುದು ಮತ್ತು ಎರಡನೇ ಕೀಯಿಂಗ್ ಆದಂತಹ ಎಲ್ಲಾ ಮಾರ್ಕ್ಸ್‌ಲಿಸ್ಟ್‌ಗಳನ್ನು ಒಟ್ಟಿಗೆ ಸೂಕ್ತ ಸ್ವೀಕೃತಿ ಪಡೆದು ಸುಭದ್ರವಾಗಿ ತಾಂ.ಪ.ಮಂಡಳಿಗೆ ಹಸ್ತಾಂತರಿಸಲು ಕ್ರಮಕೈಗೊಳ್ಳುವುದು.

3. ಮೊದಲನೇ ಕೀಯಿಂಗ್ ಆದ ಮಾರ್ಕ್ಸ್‌ಲಿಸ್ಟ್‌ಗಳ ಮೇಲೆ "1st Entry keyed" ಮತ್ತು ಎರಡನೇ ಕೀಯಿಂಗ್ ಆದ ಮಾರ್ಕ್ಸ್‌ಲಿಸ್ಟ್‌ಗಳ ಮೇಲೆ "2nd Entry keyed" ಎಂದು ಠಸ್ಸೆ ಹೊಡೆಸಿ ಕೆ.ಹಿ.ಓ ಕಿರು ಸಹಿ ಮಾಡಿಸುವ ವ್ಯವಸ್ಥೆ ಮಾಡುವುದು ಮತ್ತು ಕೀಯಿಂಗ್ ಮಾಡಿಸಲು ಬೇಕಾದ ತಂತ್ರಾಂಶ ಸ್ಥಾಪಿಸುವಲ್ಲಿ ಮತ್ತು ತಾಂತ್ರಿಕ ಸಹಾಯಕ್ಕಾಗಿ ಶ್ರೀ ಡಿ.ವಿ.ಶ್ರೀನಿವಾಸಮೂರ್ತಿ, ಸಿಸ್ಟಂ ಅನಾಲಿಸ್ಟ್ :ಶ್ರೀಮತಿ ಬಿ.ಹೆಚ್.ಸುಷ್ಮ, ಪ್ರೋಗ್ರಾಮರ್ ತಾಂತ್ರಿಕ ಪರೀಕ್ಷಾ ಮಂಡಳಿ , ಶ್ರೀ ಕೆ. ಮಹದೇವಯ್ಯ,ಆ.ಶ್ರೇ.ಉ/ಗಣಕ ಕೇಂದ್ರ ಹಾಗೂ ಶ್ರೀ ಹರೀಶ್ ಶೆಟ್ಟಿ, ಆ.ಶ್ರೇ.ಉ, ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಮಂಗಳೂರು ಇವರ ಮಾರ್ಗದರ್ಶನ ಪಡೆಯಬೇಕೆಂದು ಈ ಮೂಲಕ ತಿಳಿಸಲಾಗಿದೆ. ಪರೀಕ್ಷಾ ಗೌಪ್ಯತೆ ಮತ್ತು ಪಾವಿತ್ರ್ಯತೆ ಕಾಪಾಡಬೇಕೆಂದು ಸೂಚಿಸಲಾಗಿದೆ.

4. ಮರುಮೌಲ್ಯಮಾಪನ ಮುಕ್ತಾಯವಾದ ನಂತರ ಒಟ್ಟು ಉತ್ತರ ಪತ್ರಿಕೆಗಳಿಗೆ, ಮಾರ್ಕ್ಸ್‌ಲಿಸ್ಟ್‌ನಲ್ಲಿನ ಕ್ಯಾಂಡಿಡೇಟ್‌ಗಳ ಸಂಖ್ಯೆ ಮತ್ತು BTELinx Online ನಲ್ಲಿ entry ಆಗಿರುವ ಸಂಖ್ಯೆಗಳಿಗೆ ತಾಳೆ ಮಾಡಿ ಕಾರ್ಯದರ್ಶಿಯವರಿಗೆ ವರದಿ ನೀಡುವುದು.

ಕಾರ್ಯದರ್ಶಿ

ಇವರಿಗೆ,
ಮರುಮೌಲ್ಯಮಾಪನ ಕೇಂದ್ರಗಳ ಎಲ್ಲಾ ಅಧಿಕಾರಿಗಳು/ ಶಿಬಿರಾಧಿಕಾರಿಗಳು/
ಮೇಲ್ವಿಚಾರಕರು/ಮುಖ್ಯಪರೀಕ್ಷಕರು/ಸಂಬಂಧಪಟ್ಟ ಅಧಿಕಾರಿ/ ಸಿಬ್ಬಂದಿ ವರ್ಗದವರಿಗೆ.

ಪ್ರತಿ: 1.ಕಾರ್ಯದರ್ಶಿಯವರ ಆಪ್ತ ಶಾಖೆ 2.ಕಡತಕ್ಕೆ

**ಕರ್ನಾಟಕ ಸರ್ಕಾರ**

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ:ಬಿಟಿಇ/02/ಇಸಿಎಸ್(2)/2014

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು -560001
ದಿನಾಂಕ: 18-02-2015

**ಸುತ್ತೋಲೆ**

ವಿಷಯ: ಮರುಮೌಲ್ಯಮಾಪನ ಕೇಂದ್ರಗಳಲ್ಲಿ ಮರುಮೌಲ್ಯಮಾಪಕರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ.

ಉಲ್ಲೇಖ: ನಿರ್ದೇಶಕರ ಜ್ಞಾಪನ ಸಂಖ್ಯೆ:ಬಿಟಿಇ/02ಇಸಿಎಸ್(2)/2014 ದಿ:16-02-2015

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಾಂತ್ರಿಕ ಪರೀಕ್ಷಾ ಮಂಡಳಿಯ ಮರುಮೌಲ್ಯಮಾಪನ ಕೇಂದ್ರದಲ್ಲಿ ಮರುಮೌಲ್ಯಮಾಪಕರು ತಮ್ಮ ಕರ್ತವ್ಯವನ್ನು ನಿರ್ವಹಿಸುವಾಗ ಈ ಕೆಳಕಂಡ ಅಂಶಗಳನ್ನು ಗಮನದಲ್ಲಿಡುವಂತೆ ಸೂಚಿಸಲಾಗಿದೆ.

1. ಮರುಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರದಲ್ಲಿ ಬೆಳಗ್ಗೆ 9.30 ಗಂಟೆಗೆ ಹಾಜರಾಗತಕ್ಕದ್ದು ಮತ್ತು ತಮ್ಮ ವಿಭಾಗದ ಹಾಜರಾತಿ ಪುಸ್ತಕದಲ್ಲಿ ಕಡ್ಡಾಯವಾಗಿ ಸಹಿ ಮಾಡಿ ಸಂಜೆ 5.00 ಗಂಟೆವರೆಗೆ ಕೇಂದ್ರದಲ್ಲಿ ಹಾಜರಿದ್ದು ತಮ್ಮ ಇನ್ನಿಬ್ಬರು ಸಮಿತಿಯ ಸದಸ್ಯರೊಡನೆ ಸಕ್ರಿಯವಾಗಿ ಕೆಲಸ ನಿರ್ವಹಿಸತಕ್ಕದ್ದು.
2. ಸಂಬಂಧಿಸಿದ ವಿಭಾಗದ ಛೇರ್ಮನ್/ಮೇಲ್ವಿಚಾರಕರಿಂದ ಮರುಮೌಲ್ಯಮಾಪನ ಮಾಡಬೇಕಾದ ಉತ್ತರಪತ್ರಿಕೆಗಳ ಪ್ಯಾಕೆಟ್‌ಗಳನ್ನು ಪಡೆದು ಪರಿಶೀಲಿಸಿ ನಂತರ Issue Register ನಲ್ಲಿ ಸಹಿ ಮಾಡತಕ್ಕದ್ದು.
3. ಮರುಮೌಲ್ಯಮಾಪಕರು (3 ಜನರ ಸಮಿತಿ) ಪ್ರತಿ ದಿನ ಕನಿಷ್ಠ 30 ಉತ್ತರ ಪತ್ರಿಕೆಗಳನ್ನು ಸಂಪೂರ್ಣವಾಗಿ ಮೌಲ್ಯಮಾಪನ ಮಾಡಬೇಕು. ಭರ್ತಿ ಮಾಡಿದ ಮರುಮೌಲ್ಯಮಾಪನದ ನಮೂನೆಗಳನ್ನು ಆಯಾ ಉತ್ತರಪತ್ರಿಕೆಗಳೊಳಗೇ ಇಟ್ಟು ಪೂರ್ಣಗೊಂಡ ಪ್ಯಾಕೆಟ್‌ಗಳನ್ನು ಆಗಿಂದ್ದಾಗ್ಗೆ ಸಹಿ ಮಾಡಲ್ಪಟ್ಟ ಮಾರ್ಕ್ಸ್‌ಲಿಸ್ಟ್‌ಗಳ ಸಹಿತ ಹಿಂತಿರುಗಿಸುವುದು. ಅಪೂರ್ಣವಾದ ಪ್ಯಾಕೆಟ್‌ಗಳನ್ನು ಇಡದಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.
4. ಮರುಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಮೂರು ಜನ ಸದಸ್ಯರು ಸಕ್ರಿಯವಾಗಿ ಜೊತೆಯಲ್ಲಿ ಕುಳಿತು ಉತ್ತರಪತ್ರಿಕೆಯಲ್ಲಿನ ಉತ್ತರಗಳನ್ನು ಓದಿ ಮೌಲ್ಯಮಾಪನ ಸಮಯದಲ್ಲಿ ಮುಖ್ಯ ಪರೀಕ್ಷಕರಿಂದ ರಚಿತವಾದ ಸ್ಕೀಂ ಆಫ್ ವ್ಯಾಲ್ಯುಯೇಷನ್ ಮತ್ತು ಮಾದರಿ ಉತ್ತರಗಳ ಪ್ರಕಾರವೇ ಅಂಕಗಳನ್ನು ನಿರ್ಧರಿಸಿ ಮರುಮೌಲ್ಯಮಾಪನ ನಮೂನೆಯಲ್ಲಿ ಸ್ಪಷ್ಟವಾಗಿ ದಾಖಲಿಸಬೇಕು. ಮೌಲ್ಯಮಾಪನವಾಗಿರದ ಉತ್ತರಗಳನ್ನು ಮರುಮೌಲ್ಯಮಾಪನದ ವೇಳೆ ಗಣನೆಗೆ ತೆಗೆದುಕೊಂಡು ಸ್ಕೀಂ ಆಫ್ ವ್ಯಾಲ್ಯುಯೇಷನ್ ಪ್ರಕಾರ ಅಂಕಗಳನ್ನು ನೀಡುವುದು.
5. ಶೂನ್ಯ ಅಂಕಗಳನ್ನು ದಾಖಲಿಸುವಾಗ ಅಕ್ಷರಗಳಲ್ಲಿಯೇ ಅಂಕಗಳನ್ನು ನಮೂದಿಸಲು (ಉದಾ: zero zero) ಸೂಚಿಸಲಾಗಿದೆ.
6. ಮರುಮೌಲ್ಯಮಾಪನ ನಮೂನೆಗಳನ್ನು ಯಾವುದೇ ರೀತಿಯ ತಪ್ಪುಗಳು ಇಲ್ಲದಂತೆ ಸಂಪೂರ್ಣವಾಗಿ ಭರ್ತಿ ಮಾಡಿ ಖಾಲಿ ಇದ್ದ ಕಡೆ ಅಡ್ಡಗೆರೆ ಹಾಕುವುದು ಮತ್ತು ಮೂರು ಜನ ಮರುಮೌಲ್ಯಮಾಪಕರು ಸಹಮತದಿಂದ ಪೂರ್ಣಸಹಿ ಮಾಡಿ ತಮ್ಮತಮ್ಮ ಕೋಡ್ (Staff Id) ಬರೆಯಲು ಸೂಚಿಸಲಾಗಿದೆ.
7. ಪ್ರತಿ ಉತ್ತರ ಪತ್ರಿಕೆಯ ಮರುಮೌಲ್ಯಮಾಪನದ ನಂತರ ಮರುಮೌಲ್ಯಮಾಪನದ ನಮೂನೆಯಲ್ಲಿ ಒಟ್ಟು ಅಂಕಗಳು ಮತ್ತು ಹಳೆಯ ಅಂಕಗಳ ವ್ಯತ್ಯಾಸವನ್ನು + / – ಚಿಹ್ನೆಯಲ್ಲಿ ಸ್ಪಷ್ಟವಾಗಿ ನಮೂದಿಸುವುದು.
8. ಮರುಮೌಲ್ಯಮಾಪಕರು ಸದರಿ ನಮೂನೆಗಳಿಂದ ಮರುಮೌಲ್ಯಮಾಪನದ ಒಟ್ಟು ಅಂಕಗಳನ್ನು ಮಾರ್ಕ್ಸ್‌ಲಿಸ್ಟ್‌ಗೆ ವರ್ಗಾಯಿಸುವುದು ಹಾಗೂ ಮಾರ್ಕ್ಸ್ ಲಿಸ್ಟ್ ಕೊನೆಯಲ್ಲಿ ಸಮಿತಿಯ ಮೂರೂ ಜನರು ಪೂರ್ಣ ಸಹಿ ಮಾಡಿ ಹೆಸರು ಮತ್ತು Staff Id ಕೋಡ್‌ಗಳನ್ನು ಬರೆಯಲು ಸೂಚಿಸಲಾಗಿದೆ.
9. ಮಾರ್ಕ್ಸ್‌ಲಿಸ್ಟ್‌ಗಳಲ್ಲಿ ಮತ್ತು ಮರುಮೌಲ್ಯಮಾಪನ ನಮೂನೆಗಳಲ್ಲಿ ಅಂಕಗಳನ್ನು ಸ್ಫುಟವಾಗಿ ಬರೆಯುವುದು: ಯಾವುದೇ ಕಾರಣಕ್ಕೂ ಅಂಕಗಳನ್ನು ತಿದ್ದಬಾರದಾಗಿ ಸೂಚಿಸಿದೆ/
10. ಕಾರ್ಯದರ್ಶಿ, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು ಇವರು ಕಾಲಕಾಲಕ್ಕೆ ನೀಡುವ ಸೂಚನೆಗಳನ್ನು ಪಾಲಿಸುವುದು.

ಈ ಮೇಲಿನ ಎಲ್ಲಾ ಅಂಶಗಳನ್ನು ಗಂಭೀರವಾಗಿ ಪರಿಗಣಿಸಿ ಲೋಪದೋಷಗಳಿಗೆ ಅವಕಾಶವಿಲ್ಲದಂತೆ ಸಮರ್ಪಕವಾಗಿ ಮರುಮೌಲ್ಯಮಾಪನ ಕಾರ್ಯ ಮಾಡುವಂತೆ ಸೂಚಿಸುತ್ತಾ, ಒಂದು ವೇಳೆ ಲೋಪದೋಷಗಳನ್ನು ಎಸಗಿದಲ್ಲಿ/ಸೂಚನೆಗಳನ್ನು ಪಾಲಿಸದಿದ್ದಲ್ಲಿ .ಮರುಮೌಲ್ಯಮಾಪಕರ ವಿರುದ್ಧ ತಾಂತ್ರಿಕ ಪರೀಕ್ಷಾ ಮಂಡಳಿಯ ನಿಯಮಗಳು ಮತ್ತು ಶಿಕ್ಷಣ ಕಾಯ್ದೆ ನಿಯಮ 28ರ ಅಡಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದು ಎಚ್ಚರಿಸಲಾಗಿದೆ.

ಕಾರ್ಯದರ್ಶಿ

ಇವರಿಗೆ,
1) ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳು – ಸಂಸ್ಥೆಗಳಲ್ಲಿ ಉಪನ್ಯಾಸಕರುಗಳಿಗೆ ಸುತ್ತೋಲಿಸಲು
2) ಎಲ್ಲಾ ಮರುಮೌಲ್ಯಮಾಪಕರು – ಮಾಹಿತಿಗಾಗಿ– ಶಿಬಿರದ ಮೇಲ್ವಿಚಾರಕರಿಂದ ಪರಿಚಲನೆ ಮೂಲಕ

ಪ್ರತಿ:
1) ಇ – ಗವರ್ನೆನ್ಸ್ ವಿಭಾಗ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಗಣಕ ಕೇಂದ್ರ – ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಲು
3) ಮರುಮೌಲ್ಯಮಾಪನ ಕೇಂದ್ರದಲ್ಲಿ ಪ್ರಕಟಣೆಗಾಗಿ
4) ಕಡತಕ್ಕೆ